ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಮಂಗಳವಾರ, ದಿನಾಂಕ : 10 ನೇ ಮಾರ್ಚ್, 2020

ಕಾರವಾರ ಜಿಲ್ಲೆಯ ಹಳಿಯಾಳ ತಾಲ್ಲೂಕಿನ ಲೇಔಟ್‌ಗಳ ಮಾಹಿತಿ ಕುರಿತು

ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

553 (691) ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಾರವಾರ ಜಿಲ್ಲೆಯ ಹಳಿಯಾಳ ತಾಲ್ಲೂಕಿನಲ್ಲಿ ಕಳೆದ 5 ವರ್ಷಗಳಿಂದ ಆಗಿರುವ ಲೇಔಟ್‌ಗಳ ವಿವರ ನೀಡುವುದು ;

(ಸವಿಸ್ತಾರ ವರದಿ ಅಂದರೆ ಆಗಿರುವ ಸ್ಥಳ ಪ್ಲಾಟ್‌ಗಳ ವಿವರ ಅದಕ್ಕೆ ಸಂಬಂಧಿಸಿದ ಹಕ್ಕುದಾರರು ಈ ಸ್ವತ್ತು ಮಾಡಿದ ಲೇಔಟ್‌ಗಳ ವಿವರ ನೀಡುವುದು)

(ಆ) ಲೇಔಟ್ ಮಾಡಲು ಇರುವ ಮಾನದಂಡವೇನು; ಎಷ್ಟು ಲೇಔಟ್‌ಗಳು ಅಧಿಕೃತವಾಗಿ ನೋಂದಾವಣೆಗೆ ಸಿದ್ಧವಾಗಿರುತ್ತದೆ; (ಸವಿಸ್ತಾರ ವರದಿ ನೀಡುವುದು)

(ಇ) ಅಭಿವೃದ್ಧಿ ಶುಲ್ಕ ತುಂಬದೇ ಇದ್ದಲ್ಲಿ ಸೈಟ್ ಮಾರಲು ನಗರ ಸಭೆ/ಪುರಸಭೆ ಅಧಿಕಾರಿ ಅನುಮತಿ ನೀಡಬಹುದೇ ; ದಾಂಡೇಲಿ/ಹಳಿಯಾಳ ತಾಲ್ಲೂಕಿನ ಎಷ್ಟು ಲೇಔಟ್ ಮಾಲೀಕರು ಇಲ್ಲಿಯವರೆಗೆ ಅಭಿವೃದ್ಧಿ ಶುಲ್ಕ ತುಂಬಿರುತ್ತಾರೆ ; ಎಷ್ಟು ಮಂದಿ ಲೇಔಟ್ ಮಾಲೀಕರು ಅಭಿವೃದ್ಧಿ ಶುಲ್ಕ ತುಂಬಬೇಕಾಗಿರುತ್ತದೆ ; ಅಭಿವೃದ್ಧಿ ಶುಲ್ಕ ತುಂಬದೇ ಇರುವ ಸೈಟ್ ಮಾಲೀಕರಿಗೆ ಸೈಟ್ ಮಾರಲು ಅನುಮತಿ ನೀಡಿರುವರೇ ; (ವಿವರ ನೀಡುವುದು)

(ಈ) ಈಗಾಗಲೇ ಸಾರ್ವಜನಿಕರ ದೂರಿನ ಪ್ರಕಾರ ಕೆಲವೊಂದು ಸೈಟ್ ಮಾಲೀಕರಿಗೆ ಅಭಿವೃದ್ಧಿ ಶುಲ್ಕ ತುಂಬಿಸಿಕೊಳ್ಳದೇ ಅನಧಿಕೃತವಾಗಿ ನೋಂದಣಿಗೆ ನಗರಸಭೆ/ಪುರಸಭೆ ಅಧಿಕಾರಿಯವರು ಅವಕಾಶ ಕಲ್ಪಿಸಿರುತ್ತಾರೆಂದು ತಿಳಿದು ಬಂದಿದ್ದು, ಕೂಡಲೇ ಸರ್ಕಾರ ತನಿಖೆ ಮಾಡಿ ಈ ರೀತಿ ಅವ್ಯವಹಾರ ಮಾಡಿರುವ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳುವುದೇ ; ಇಲ್ಲವೇ ಸದರಿ ವಿಷಯದಲ್ಲಿ ಖಾತರಿ ಪಡಿಸಿಕೊಳ್ಳಲು ಸಂಬಂಧಿಸಿದ ಜಿಲ್ಲಾಧಿಕಾರಿಯಿಂದ ತನಿಖೆ ಮಾಡಿಸುವರೇ ? (ವಿವರ ನೀಡುವುದು)